KATK010046322018

**ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು**

**ಸ್ಪೆಷಲ್ ಕೇಸ್ ನಂ. 384/2018**

| | | |
|---|---|---|
| ಹೆಸರು | ಆರ್.ಟಿ. ಸ್ವಾಮಿ | ಫ್ರಾಸಾ- 4 |
| ತಂದೆಯ ಹೆಸರು | ಆರ್.ಎಸ್.ತಿಪ್ಪೇಸಾಮಿ | ಚಾಸಾ- 5 |
| ವಯಸ್ಸು | 61 ವರ್ಷ | |
| ಉದ್ಯೋಗ | ನಿವೃತ್ತ ಕಂದಾಯದ ತನಿಖಾಧಿಕಾರಿ | |
| ವಾಸಸ್ಥಳ | ಬೆಂಗಳೂರು | |

ದಿನಾಂಕಃ **12-04-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ-**

ನಾನು 2015 ರಿಂದ ಮೇ 2021 ರವರೆಗ ಕಂದಾಯದ ತನಿಖಾಧಿಕಾರಿಯಾಗಿ ಕಸಬಾ ಹೋಬಳಿ, ತಿಪಟೂರು ತಾಲ್ಲೂಕಿನಲ್ಲಿ ಕೆಲಸ ಮಾಡಿದ್ದೇನೆ. ಬೆಸ್ಕಾಂ ಗುಪ್ತ ದಳ ಪೊಲೀಸರು ಸ.ನಂ. 268 ರಲ್ಲಿ ಕೊಳವೆ ಬಾವಿ ಇದೆಯೋ ಇಲ್ಲವೋ ಎಂಬ ಬಗ್ಗೆ ವರದಿ ನೀಡುವಂತೆ ಕೇಳಿದರು. ಅದರಂತೆ ನಾನು ಸ್ಥಳಕ್ಕೆ ಭೇಟಿ ನೀಡಿ ನೋಡಿದಾಗ ಸ.ನಂ. 268 ರಲ್ಲಿ ಕೊಳವೆ ಬಾವಿ ಇತ್ತು. ಆ ಜಮೀನು ಕೆಂಪನಂಜಮ್ಮ ಇವರ ಹೆಸರಿನಲ್ಲಿ ಇದೆ. ಇದರ ಬಗ್ಗೆ ನಾನು ವರದಿಯನ್ನು ನೀಡಿದ್ದೇನೆ. ವರದಿಯನ್ನು ನಿಪಿ-10 ಎಂದು ಗುರುತಿಸಲಾಯಿತು. ನಾನು ಸ್ಥಳಕ್ಕೆ

ಹೋದ ಸಮಯದಲ್ಲಿ ಸತೀಶ ಇವರು ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ಪಹಣಿಯಲ್ಲಿ ಕೊಳವೆ ಬಾವಿ ಇರುವ ಬಗ್ಗೆ ನಮೂದಿಸಿಲ್ಲ.

**ಪಾಟೀ ಸವಾಲು: 1 ನೇ ಆರೋಪಿ ಪರ ವಕೀಲರಿಂದ -**

ಪಹಣಿಯಲ್ಲಿ ಯಾರು ಜಮೀನಿನ ಸ್ವಾಧೀನದಲ್ಲಿ ಇದ್ದಾರೋ ಅವರ ಹೆಸರನ್ನು ಬರೆಯುತ್ತೇವೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಮಹಜರ್ ಮಾಡಿದ್ದೇನೆ , ಬೆಸ್ಕಾಂ ಪೊಲೀಸರಿಗೆ ಕೊಟ್ಟಿದ್ದೇನೆ. ಬೆಸ್ಕಾಂ ಪೊಲೀಸರು ಹೇಳಿದ ರೀತಿಯಲ್ಲಿ ನಾನು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ,

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು